**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,ಹುಣಸೂರು**

**ಸಿಸಿ ನಂ.100/2024**

**ಫಿರ್ಯಾದುದಾರರು:** ಸರ್ಕಾರ (ಹುಣಸೂರು ಪಟ್ಟಣ ಪೋಲೀಸರಿಂದ)

- ವಿರುದ್ಧ -

**ಆರೋಪಿತರು:**

1. ಭರತ್.ಆರ್. , ಬಿನ್ ಲೇಟ್ ರಾಜು.ಕೆ.,
   40 ವರ್ಷ, ಕಾರ್ಮಿಕ,

2. ವಿಜಯಶ್ರೀ, ಕೋಂ ಭರತ್.ಆರ್., 30 ವರ್ಷ,
   ಗೃಹಿಣಿ,

ಇಬ್ಬರೂ ಎಲ್.ಐ.ಜಿ.55,
ಕೆ.ಹೆಚ್.ಬಿ. ಕಾಲೋನಿ, ಕಲ್ಕುಣಿಕೆ,
ಹುಣಸೂರು ತಾಲ್ಲೂಕು ವಾಸಿಗಳು

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿತರ ಹೇಳಿಕೆ**

| | |
|---|---|
| ಪ್ರಶ್ನೆ 1: | ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷ್ಯಗಳನ್ನು ನೀವು ತಿಳಿದುಕೊಂಡಿರುವಿರಾ? |
| ಉತ್ತರ: | ತಿಳಿದಿದೆ |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 2: | ಪಿ.ಡಬ್ಲ್ಯು-1 ಸರಿತಾ ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು, ಚಾಸಾ.1ಮಂದಾರ ಮತ್ತು ಚಾಸಾ.3 ಪ್ರಕಾಶ, ಚಾಸಾ.4 ಜಯಂತ್ ಕುಮಾರ್, ಚಾಸಾ.5 ಸೈಯದ್ ಫರಾಜ್ ಹಾಗೂ ಚಾಸಾ.6 ದಿನೇಶ್ ರವರು ಅವರಿಗೆ ಗೊತ್ತಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಈ ಪ್ರಕರಣದಲ್ಲಿ ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ದಿನಾಂಕಃ 12.12.2023 ರಂದು ಬೆಳಿಗ್ಗೆ 6.30 ಗಂಟೆಗೆ ಅವರ ಮನೆಯ ಬಳಿ ಇರುವಾಗ ಚಾಸಾ.1ರವರ ಮನೆಯಲ್ಲಿ ಜೋರಾಗಿ ಕಿರುಚಾಡುವುದು ಕೇಳಿಬಂದಿದ್ದು, ತದನಂತರ ಅವರು ಚಾಸಾ.3ರವರ ಜೊತೆ ಹೋಗಿ ನೋಡಿದಾಗ 1ನೇ ಆರೋಪಿಯಾದ ನೀವು ಚಾಸಾ.1ರವರಿಗೆ ಲೋಫರ್ ಮುಂಡೆ ಎಂದು ಹೊಲಸು ಮಾತುಗಳಿಂದ ಬೈದಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 1ನೇ ಆರೋಪಿಯಾದ ನೀವು ಚಾಸಾ.1ರವರ ಕತ್ತು ಹಿಡಿದುಕೊಂಡು ಅವರ |

| | |
|---|---|
| | ಮಾಂಗಲ್ಯ ಚೈನನ್ನು ಕಿತ್ತು ಹಾಕಿ, ಅವರ ಜುಟ್ಟನ್ನು ಹಿಡಿದುಕೊಂಡು ಬೀದಿಯಲ್ಲಿ ಎಳೆದುಕೊಂಡು ಬಂದು, ಅವರ ಎಡಪಕ್ಕೆಗೆ ಹೊಡೆದು, ಅವರ ಕೈಗಳನ್ನು ಹಿಡಿದುಕೊಂಡು ನಿನ್ನನ್ನು ಸಾಯಿಸುತ್ತೇನೆ ಎಂದು ಹಾಗೂ ನಿನ್ನ ಮಗನನ್ನು ಕೂಡ ವಿಷ ಹಾಕಿ ಸಾಯಿಸುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಮತ್ತು ಚಾಸಾ.3ರವರು ಬಂದು ಜಗಳವನ್ನು ಬಿಡಿಸಿ, ಚಾಸಾ.1ರವರನ್ನು ಚಾಸಾ.3ರವರು ಬೈಕಿನಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 7: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಜಗಳವಾದ ಬಗ್ಗೆ ಚಾಸಾ.1ರವರು ಠಾಣೆಗೆ ದೂರು ಕೊಟ್ಟ ಬಗ್ಗೆ ಅವರಿಗೆ ಗೊತ್ತಾಗಿದ್ದು, ಅವರು ಚಾಸಾ.1ರವರ ಬಳಿ ಯಾಕೆ ಗಲಾಟೆ ಆಯಿತು ಎಂದು ವಿಚಾರಿಸಿದಾಗ ನೀರು ಹಿಡಿದುಕೊಳ್ಳುವ ವಿಚಾರದಲ್ಲಿ |

| | |
|---|---|
| | ಗಲಾಟೆಯಾಯಿತು ಎಂದು ಚಾಸಾ.1ರವರು ಹೇಳಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಜಗಳವಾದ ಬಗ್ಗೆ ಅವರು ಪೊಲೀಸರ ಮುಂದೆ 6 ದಿನದ ನಂತರ ಹೇಳಿಕೆ ನೀಡಿದ್ದು, ಜಗಳವಾದ ದಿನ ಚಾಸಾ.1ರವರಿಗೆ ಹಲ್ಲೆ ಮಾಡಿದ ಆರೋಪಿತರಾದ ನಿಮ್ಮನ್ನು ನೋಡಿದರೆ ಗುರುತಿಸುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 9: | ಪಿ.ಡಬ್ಲ್ಯು-2 ಜಯಂತ್ ಕುಮಾರ್ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ಮಂದಾರ ಅವರ ಅಕ್ಕ, ಚಾಸಾ.2 ಸರಿತಾ ಅವರ ಚಿಕ್ಕಮ್ಮ, ಚಾಸಾ.3 ಪ್ರಕಾಶ್ ಅವರ ಮಾವರಾಗಿದ್ದು ಮತ್ತು ಚಾಸಾ.5 ಸೈಯದ್ ಫರಾಜ್ ಹಾಗೂ ಚಾಸಾ.6 ದಿನೇಶ್ ಅವರ ಸ್ನೇಹಿತರಾಗಿದ್ದು, ಈ ಪ್ರಕರಣದ ಬಗ್ಗೆ ಅವರು ಪೊಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |

| | |
|---|---|
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 10: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರಿಗೆ, ಚಾಸಾ.1ರವರು ದಿನಾಂಕಃ 12.12.2023ರಂದು ಬೆಳಿಗ್ಗೆ 7.30 ಗಂಟೆಗೆ ಕರೆ ಮಾಡಿದ್ದು, ನಂತರ ಅದೇದಿನ ಬೆಳಿಗ್ಗೆ 6.30 ಗಂಟೆಗೆ ಅವರು ಮನೆಯಲ್ಲಿ ಪಾತ್ರೆ ತೊಳೆಯುತ್ತಿದ್ದಾಗ 1ನೇ ಆರೋಪಿಯಾದ ನೀವು ಅದೇ ಸಮಯಕ್ಕೆ ನೀರು ಹಿಡಿದುಕೊಳ್ಳಲು ಬಂದಿದ್ದು, ನಿಮಗೆ ಚಾಸಾ.1ರವರು 2 ನಿಮಿಷ ಕಾಯಿರಿ ಎಂದು ಹೇಳಿದಾಗ, ನೀವು ಅವರಿಗೆ ಲೋಫರ್ ಮುಂಡೆ ನಾನು ನಿನ್ನನ್ನು ಕಾಯಬೇಕಾ, ನಿಮ್ಮಮ್ಮನ ಕೇಯ್ಯು ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿನ್ನನ್ನು ಸಾಯಿಸುತ್ತೇನೆ ಎಂದು ಹೇಳಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 11: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, 1ನೇ ಆರೋಪಿಯಾದ ನೀವು ಚಾಸಾ.1ರವರಿಗೆ ನಿನ್ನ ಆಟ ಜಾಸ್ತಿಯಾಗಿದೆ ಎಂದು ಹೇಳಿ ಅವರ ಕುತ್ತಿಗೆಯನ್ನು ಹಿಡಿದ, ತಾಳಿಯನ್ನು ಕಿತ್ತು ಬಿಸಾಕಿ, ಅವರ ಸೊಟಂಕ್ಕೆ ಕಾಲಿನಿಂದ ಒದ್ದು, ಹಿಂದಲೆಯನ್ನು ಹಿಡಿದುಕೊಂಡು ಆಚೆಗೆ ಬಿಸಾಡಲು ಹೊಡೆದಿದ್ದು, ನಂತರ 2ನೇ ಆರೋಪಿಯಾದ ನೀವು ಬಂದು ಚಾಸಾ.1ರವರ ಕೈಗಳನ್ನು |

| | |
|---|---|
| | ಬಿಗಿಯಾಗಿ ಹಿಡಿದು ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 12: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ಚಾಸಾ.1ರವರ ಮಗ ಮತ್ತು ಅಕ್ಕ-ಪಕ್ಕದವರು ಬಂದು ಜಗಳ ಬಿಡಿಸಿದರು ಎಂಬುದಾಗಿ ಚಾಸಾ.1ರವರು ಅವರಿಗೆ ಹೇಳಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 13: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಾಸಾ.1ರವರು ಚಾಸಾ.3ರವರ ಜೊತೆ ಹೋಗಿ ಆಸ್ಪತ್ರೆಗೆ ದಾಖಲಾಗಿ, ಅವರನ್ನು ಕರೆ ಮಾಡಿ ಬರುವಂತೆ ಕರೆದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |

| | |
|---|---|
| ಪ್ರಶ್ನೆ 14: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತದನಂತರ ಅವರು ಆಸ್ಪತ್ರೆಗೆ ಹೋಗಿ ಚಾಸಾ.1ರವರನ್ನು ವಿಚಾರಿಸಿ ಕೆಲಸಕ್ಕೆ ಹೋಗಿರುವುದಾಗಿ, ಅವರು ಊರಿಗೆ ಬಂದ ನಂತರ ಪ್ರಕರಣ ದಾಖಲಾದ ಬಗ್ಗೆ ಅವರಿಗೆ ಗೊತ್ತಾಗಿದ್ದು, ಈ ಬಗ್ಗೆ ದಿನಾಂಕಃ 18.12.2023ರಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 15: | ಪಿ.ಡಬ್ಲ್ಯೂ-3 ಪ್ರಕಾಶ್ ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1, 2, 4 ರಿಂದ 6 ಹಾಗೂ ಆರೇಪಿತರಾದ ನೀವು ಅವರ ಗೊತ್ತಿದ್ದು, ಈ ಪ್ರಕರಣಕ್ಕೆ ಸಂಬಂಧಿದಂತೆ ಪೊಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 16: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 12.12.2024ರಂದು ಬೆಳಗಿನ ಜಾವ 6.30 ಗಂಟೆಗೆ ಅವರು ಹಾಲು ತರಲೆಂದು ಹೋಗುತ್ತಿದ್ದು, ಆಗ ಚಾಸಾ.1ರವರ ಮನೆಯಲ್ಲಿ ಗಲಾಟೆ ಕೂಗಾಟ ಕೇಳಿದ್ದು, ಅವರು ಮತ್ತು ಚಾಸಾ.2ರವರು ಹೋಗಿ |

| | |
|---|---|
| | ನೋಡಿದಾಗ, 2ನೇ ಆರೋಪಿಯಾದ ನೀವು ಚಾಸಾ.1ರವರ ಕೈ ಹಿಡಿದುಕೊಂಡಿದ್ದು, 1ನೇ ಆರೋಪಿಯಾದ ನೀವು ಚಾಸಾ.1ರವರ ಮಾಂಗಲ್ಯ ಚೈನನ್ನು ಕಿತ್ತುಹಾಕಿ, ಮುಂದಲೆ ಹಿಡಿದು ದರದರನೇ ಎಳೆದುಕೊಂಡು ಬಂದಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 17: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, 1ನೇ ಆರೋಪಿಯಾದ ನೀವು ಚಾಸಾ.1ರವರಿಗೆ ನಿನ್ನ ಮಗನಿಗೆ ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ, ಮನೆಯ ಒಳಗೆ ಬಂದರೆ ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿ, ಅವರ ಸೊಂಟದ ಬಲಭಾಗಕ್ಕೆ ಒದ್ದೀರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 18: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ತದನಂತರ ಚಾಸಾ.1ರವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಚಾಸಾ.4ರವರಿಗೆ ವಿಷಯವನ್ನು ತಿಳಿಸಿದ್ದು, 5 ದಿನದ ನಂತರ ಪೊಲೀಸರು ಅವರನ್ನು ಕರೆದಿದ್ದು, ಆಗ ಅವರು ಪೋಲೀಸರಿಗೆ ಹೇಳಿಕೆ |

| | |
|---|---|
| | ನೀಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 19: | ಪಿಡಬ್ಲ್ಯು-4 ಸೈಯದ್ ಫರಾಜ್ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ರಿಂದ ಚಾಸಾ.6ರವರು ಹಾಗೂ ಆರೋಪಿತರಾದ ನೀವು ಅವರಿಗೆ ಗೊತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 20: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 18.12.2023ರಂದು ಚಾಸಾ.1ರವರ ಮನೆಗೆ ಪೊಲೀಸರು ಆರೋಪಿತರಾದ ನೀವು ಮತ್ತು ಚಾಸಾ.1ರವರ ಮಧ್ಯೆ ಗಲಾಟೆಯಾದ ವಿಷಯಕ್ಕೆ ಸಂಬಂಧಿಸಿದಂತೆ ಮಹಜರಿಗೆ ಬಂದಿದ್ದು, ಆ ಸಮಯದಲ್ಲಿ ಚಾಸಾ.1ರವರು ಹಾಜರಿದ್ದು, ಘಟನಾ ಸ್ಥಳವನ್ನು ಪೊಲೀಸರಿಗೆ ತೋರಿಸಿದ್ದು, ಅವರ ಜೊತೆ ಚಾಸಾ.6ರವರು ಇದ್ದು, ಪೊಲೀಸರು ಮಹಜರನ್ನು ಬೆಳಿಗ್ಗೆ 11 ರಿಂದ 11.45ರವರೆಗೆ ಮಾಡಿದ್ದು, ಸದರಿ ಮಹಜರ್ ನ್ನು ನಿಪಿ.1 ಎಂದು ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಿಕೊಂಡಿದ್ದು ಹಾಗೂ ಸದರಿ |

| | |
|---|---|
| | ಮಹಜರ್ ನಲ್ಲಿ ಏನು ಬರೆಯಲಾಗಿದೆ ಎಂದು ತಿಳಿಸಿದುಕೊಂಡಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 21: | ಪಿ.ಡಬ್ಲ್ಯೂ-5 ಪ್ರಕಾಶ್ ರವರು ತಮ್ಮ ಸಾಕ್ಷ್ಯದಲ್ಲಿ, ನಿಪಿ.1 ಮಹಜರ್ ನಲ್ಲಿರುವ ಅವರ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಿದ್ದು, ಸದರಿ ಸಹಿಯನ್ನು ಅವರು ಸುಮಾರು ಒಂದು ವರ್ಷದ ಹಿಂದೆ ಹುಣಸೂರಿನ ಕಲ್ಲುಣಿಕೆಯಲ್ಲಿ ಮಧ್ಯಾಹ್ನ 12 ಗಂಟೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಹಾಕಿದ್ದು, ಸದರಿ ದಾಖಲೆಗೆ ಅವರು ಸಹಿ ಮಾಡಿದಾಗ ಸಮಯ ಮಧ್ಯಾಹ್ನ 12 ಗಂಟೆಯಾಗಿದ್ದು, ಆಗ ಅವರ ಜೊತೆ ಚಾಸಾ.5ರವರು ಹಾಜರಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 22: | ಪಿ.ಡಬ್ಲ್ಯೂ6 ಗಿರೀಶ.ಪಿ.ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 17.12.2023ರಂದು ಅವರು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಚಾಸಾ.1ರವರು ಅವರು ಮುಂದೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಃ256/2023ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ |

| | |
|---|---|
| | ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 23: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಸ್ವೀಕರಿಸಿದ ದೂರು ಮತ್ತು ಪ್ರ.ವ.ವರದಿಯನ್ನು ಹಾಗೂ ಅದರಲ್ಲಿರುವ ಅವರ ಸಹಿಗಳನ್ನು ನಿಪಿ.2 ಮತ್ತು 3 ಹಾಗೂ ನಿಪಿ.2(ಎ) ಮತ್ತು ನಿಪಿ.3(ೃಸಿ ಎಂದು ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 24: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ದಿನಾಂಕಃ 18.12.2023ರಂದು ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು, ಚಾಸಾ.1, 5 ಮತ್ತು 6ರವರಿಗೆ ನೋಟೀಸ್ ಜಾರಿ ಮಾಡಿದಾಗ ಆ ಸಮಯದಲ್ಲಿ ಚಾಸಾ.1ರವರು ಹಾಜರಿದ್ದು, ಪಂಚರಾದ ಚಾಸಾ.5 ಮತ್ತು ಚಾಸಾ.6ರವರು ಸ್ಥಳ ತೋರಿಸಿದ ಮೇರೆಗೆ ಅವರ ಸಮಕ್ಷಮ ಬೆಳಿಗ್ಗೆ 11 ರಿಂದ 11.45ರವರೆಗೆ ಮಹಜರು ಕ್ರಮವನ್ನು ಜರುಗಿಸಿದ್ದು, ಸದರಿ ಮಹಜರ್ ನಲ್ಲಿರುವ ಅವರ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಿ |

| | |
|---|---|
| | ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 25: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅವರು ಚಾಸಾ.5 ಮತ್ತು ಚಾಸಾ.6ರವರಿಗೆ ನೀಡಿದ ನೋಟೀಸ್ ನಲ್ಲಿರುವ ಅವರ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಿದ್ದು, ನಂತರ ಅದೇ ದಿನ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.2 ರಿಂದ ಚಾಸಾ.4ರವರಿಗೆ ನೋಟೀಸ್ ಜಾರಿ ಮಾಡಿ, ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದು, ಅದರಲ್ಲಿರುವ ಅವರ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಿಕೊಂಡಿದ್ದು, ಆರೋಪಿತರಾದ ನಿಮ್ಮ ಪತ್ತೆಗೆ ಪ್ರಯತ್ನಿಸಿದಾಗ ನೀವು ತಲೆಮರೆಸಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 26: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ದಿನಾಂಕಃ 09.01.2024ರಂದು ಮಹಿಳಾ ಪೇದೆಯ ಮೂಲಕ ಚಾಸಾ.1ರವರನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.164ರಡಿಯಲ್ಲಿ ಹೇಳಿಕೆ ದಾಖಲಿಸಿದ್ದು, ನಂತರ ದಿನಾಂಕಃ 05.02.2024ರಂದು ಚಾಸಾ.1ರವರ ಗಾಯದ ಪ್ರಮಾಣ |

| | |
|---|---|
| | ಪತ್ರವನ್ನು ಹಾಗೂ ಚಾಸಾ.1ರವರು ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯನ್ನು ಸ್ವೀಕರಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 27: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು ನ್ಯಾಯಾಲಯದಿಂದ ಜಾಮೀನು ಪಡೆದು ದಿನಾಂಕಃ 09.01.2024ರಂದು ಅವರ ಮುಂದೆ ಹಾಜರಾದ ಮೇರೆಗೆ ನೋಟೀಸ್ ಜಾರಿಗೊಳಿಸಿ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು, ಅವರು ಆರೋಪಿತರಾದ ನಿಮ್ಮನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 28: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಿಪಿ.1 ಮಹಜರಿನಲ್ಲಿ, ನಿಪಿ.2ರ ದೂರಿನಲ್ಲಿ ನಿಪಿ.7ರ ಹೇಳಿಕೆಯಲ್ಲಿ ಚಾಸಾ.1ರವರ ಸಹಿಗಳನ್ನು ಗುರುತಿಸಿದ್ದು, ನಿಪಿ.1 ಮತ್ತು ನಿಪಿ.2ರಲ್ಲಿ ಚಾಸಾ.1ರವರ ಸಹಿಗಳನ್ನು ನಿಪಿ.1(ಸಿ) ಮತ್ತು ನಿಪಿ.2(ಬಿ) ಎಂದು, ನಿಪಿ.7 ರಲ್ಲಿ ಚಾಸಾ.1ರವರ ಸಹಿಗಳನ್ನು ನಿಪಿ.7(ಬಿ) ಯಿಂದ (ಇ) |

| | |
|---|---|
| | ಎಂದು ಗುರುತಿಸಿಲಾಗಿದ್ದು, ಈ ಹಂತದಲ್ಲಿ ತನಿಖೆ ಪೂರ್ಣಗೊಂಡ ಕಾರಣ ನಿಮ್ಮ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 29: | ಪಿ.ಡಬ್ಲ್ಯೂ-7 ಡಾ.ಟಿ.ಗುರುಮಲ್ಲಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ, ಅವರು ದಿನಾಂಕಃ 12.12.2023ರಂದು ಬೆಳಿಗ್ಗೆ 10.25ಕ್ಕೆ ಚಾಸಾ.1ರವರು ಅವರು ಮುಂದೆ ಹಲ್ಲೆಗೆ ಒಳಗಾದ ಹಿನ್ನಲೆಯಲ್ಲಿ ಚಿಕಿತ್ಸೆಗೆ ಹಾಜರಾದ ಸಮಯದಲ್ಲಿ ಅವರನ್ನು ಪರೀಕ್ಷಿಸಿದಾಗ ಅವರ ಕುತ್ತಿಗೆಯ ಬಲಭಾಗದಲ್ಲಿ ಒಂದು ತರಚಿದ ಗಾಯ, ಬಲಕಿವಿಯಲ್ಲಿ ನೋವು, ಹೊಟ್ಟೆಯಲ್ಲಿ ನೋವು ಮತ್ತು ಎದೆ ನೋವು ಹಾಗೂ ಉಸಿರಾಡಲು ಕಷ್ಟವಾಗುತ್ತೆದೆ ಎಂದು ತಿಳಿಸಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 30: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಗಾಯಾಳುವನ್ನು ಒಳರೋಗಿಯಾಗಿ ದಾಖಲಿಸಿಕೊಂಡು ಜನರಲ್ ಸರ್ಜರಿ ಮತ್ತು ಫಿಜಿಷಿಯನ್‌ರವರಿಗೆ ರೆಫರ್ ಮಾಡಿದ್ದು, ಗಾಯಾಳುವಿಗೆ ಹೊಟ್ಟೆನೋವು ಇದ್ದ ಕಾರಣ ಸ್ಕ್ಯಾನಿಂಗ್ ಮಾಡುವಂತೆ |

| | |
|---|---|
| | ಜನರಲ್ ಸರ್ಜನ್ ರವರು ಸೂಚಿಸಿದ್ದು, ಆದರೆ ಗಾಯಾಳು ಸ್ಕ್ಯಾನಿಂಗ್ ಮಾಡಿಸಿಕೊಂಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 31: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಾಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಬಗ್ಗೆ ಅವರು ಗಾಯದ ಪ್ರಮಾಣ ಪತ್ರ ನೀಡಿದ್ದು, ಸದರಿ ಗಾಯದ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿರುವ ಅವರ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರಃ | ಸುಳ್ಳು |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.1 | ವಿಜಯಶ್ರೀ ರಾವತ್ |
| ಪ್ರಶ್ನೆ 32: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |
| ಪ್ರಶ್ನೆ 33: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |

| | |
|---|---|
| ಉತ್ತರ: | ಇಲ್ಲ |
| ಆರೋಪಿ ನಂ.1 | ಭರತ್.ಆರ್. |
| ಆರೋಪಿ ನಂ.2 | ವಿಜಯಶ್ರೀ ರಾವತ್ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 10.03.2025.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**